-ಶ್ರೀ-

# ಪಂಚಭೇದ, ಹರಿಸರ್ವೋತ್ತಮ, ವಾಯು ಜೀವೋತ್ತಮ ತತ್ವಗಳು ಯಾಜ್ಞವಲ್ಕ್ಯರವುಗಳಲ್ಲ, ಮಧ್ವಾಚಾರ್ಯರುಗಳವೇ? ಎಂಬ ಭ್ರಮ ನಿರಸನ ದೀಪಿಕೆ

ಪ್ರಾಜ್ಞರೇ,

ಈ ಮೂಲಕ ಕೆಲವು ಅಲ್ಪಜ್ಞ ಮತ್ತು ಬುಧರೆಂದಿನಿಸಿಕೊಳ್ಳುವವರ ಯಥಾರ್ಥ ಜ್ಞಾನದ ಅಭಾವದ ತಿಮಿರ ಭೇದನ ಮಾಡುವುದು ಧರ್ಮ ಪ್ರಚಾರದಲ್ಲೊಂದು ಮಹತ್ವದ ಕಾರ್ಯವಾಗಿದೆ. ಏಕೆಂದರೆ ಈ ಕಾಲದಲ್ಲಿ ನವ ಯುವಕರು ಮತ್ತು ಹಿರಿಯರು ವೇದೋಪನಿಷತ್ ಆದಿ ಗ್ರಂಥಗಳನ್ನು ಸರಹಸ್ಯವಾಗಿ ಅಭ್ಯಸಿಸಲಾರದೆ ಇತರ ದುರಾಭಿಮಾನಿಗಳಿಂದ ಶ್ರವಣ ಮಾಡಿದನ್ನೇ ಚರ್ವಿತಚರ್ವಣ ಮಾಡುತ್ತಾರೆ. ಇದರಿಂದ ಶಾಸ್ತ್ರದ ಯಥಾರ್ಥ ಜ್ಞಾನದ ಮೇಲೆ ಮುಸುಕು ಹಾಕಿದಂತಾಗಿದೆ. ಪ್ರಸ್ತುತದಲ್ಲಿ ಒಂದು ಮಹತ್ವದ ವಿಷಯದ ಬಗ್ಗೆ ತಪ್ಪು ತಿಳುವಳಿಕೆಯಿಂದ ಜನಗಳು ವ್ಯಾಕುಲರಾಗಿದ್ದಾರೆ. ಅದೇನೆಂದರೆ,

1) ಪಂಚಭೇದ 2) ಹರಿಸರ್ವೋತ್ತಮ 3) ವಾಯು ಜೀವೋತ್ತಮ

ಈ ಮೇಲಿನ ಮೂರು ತತ್ವಗಳು ಶ್ರೀಮನ್ ಮಧ್ವಾಚಾರ್ಯರುಗಳಿಂದಲೇ ಪ್ರಣೀತವಾದವುಗಳು. ಅಲ್ಲದೇ ಯಾಜ್ಞವಲ್ಕ್ಯರು ಮಧ್ವಾಚಾರ್ಯರಿಗಿಂತಲೂ ಬಹಳ ಕೆಳಗಿನ 19ನೇ ಕಕ್ಷದಲ್ಲಿ ಇರುವವರು. ಮಧ್ವಾಚಾರ್ಯರಿಗಿಂತ ಯಾಜ್ಞವಲ್ಕ್ಯರು ಎಂದಿಗೂ ದೊಡ್ಡವರಲ್ಲ. ಇವರೇನು ಋಷಿಗಳು! ಸನ್ಯಾಸಿಗಳು ಕೂಡಾ ಅಲ್ಲ ಎಂಬ ಇತ್ಯಾದಿ ಅನೇಕ ಸಂಶಯಗಳು ತಲೆಯಲ್ಲಿ ತಾಂಡವಾಡುತ್ತವೆ.

ಈ ಬಗ್ಗೆ ಶಾಸ್ತ್ರಾಧಾರಗಳನ್ನು ಮುಂದಿಟ್ಟುಕೊಂಡು ವಿವೇಚನೆ ಮಾಡುವುದೇ ಸೂಕ್ತವಾಗುತ್ತದೆ. ಪಂಚಭೇದ ಮತ್ತು ಹರಿಸರ್ವೋತ್ತಮ, ವಾಯು ಜೀವೋತ್ತಮ ಇವುಗಳು ಮಧ್ವಾಚಾರ್ಯರುಗಳಿಂದ ಪ್ರಣೀತವಾದವುಗಳಲ್ಲ. ಈ ತತ್ವಗಳನ್ನು ಯಾಜ್ಞವಲ್ಕ್ಯರು ಈ ಮೊದಲೆ ತಮ್ಮ ಬೃಹದಾರಣ್ಯಕ ಉಪನಿಷತ್ತಿನ ಉದ್ದಕ್ಕೂ ಪ್ರತಿಪಾದಿಸಿದ್ದಾರೆ. ಇವೇ ಉಕ್ತಿಗಳಿಗೆ ಆಚಾರ್ಯರು ತಮ್ಮ ಭಾಷ್ಯದಲ್ಲಿ ವಿವರವಾಗಿ ಹೇಳಿದ್ದಾರೆ.

**ಪಂಚಭೇದ :**

ಯಾಜ್ಞವಲ್ಕ್ಯರು ಪಂಚಭೇದಗಳಲ್ಲಿ ಪ್ರಧಾನವಾಗಿರುವುದು ಜೀವೇಶ್ವರಭೇದವನ್ನೇ ವಿಶೇಷವಾಗಿ ಪ್ರತಿಪಾದಿಸಿದ್ದಾರೆ. ಉಳಿದವು ವ್ಯವಹಾರ ಸತ್ಯಗಳಾದ್ದರಿಂದ ವಿವೇಚಿಸಿಲ್ಲ. ಜೀವೇಶ್ವರ ಭೇದದ ಬಗ್ಗೆ ಯಾಜ್ಞವಲ್ಕ್ಯರು ಉಪನಿಷತ್ತಿನ ಪ್ರಥಮಾಧ್ಯಾಯದ ಅವ್ಯಾಕೃತ ಬ್ರಾಹ್ಮಣದಲ್ಲಿ "ಅಥಯೋ‌ಽ ಅನ್ಯಾಂ ದೇವತಾಂ ಉಪಾಸ್ತೇ..................." ಇತ್ಯಾದಿಗಳಲ್ಲಿ ಸ್ಪಷ್ಟವಾಗಿ ಉದ್ಘೋಷಿಸಿದ್ದನ್ನು ಆಚಾರ್ಯರು ತಮ್ಮ ಭಾಷ್ಯದಲ್ಲಿ ವಿವರವಾಗಿ ವಾಯುಪ್ರೋಕ್ತ, ಮೋಕ್ಷಧರ್ಮ ಇತ್ಯಾದಿಗಳ ಆಧಾರ ಕೊಟ್ಟು ಸಮರ್ಥಿಸಿದ್ದಾರೆ. ಯಾಜ್ಞವಲ್ಕ್ಯರು ಇನ್ನೊಂದು ಬಲವಾದ ಪ್ರಮಾಣ, ತೃತೀಯ ಅಧ್ಯಾಯದ ಅಂತರ್ಯಾಮಿ ಬ್ರಾಹ್ಮಣದಲ್ಲಿ ಜೀವೇಶ್ವರ ಭೇದದ ಬಗ್ಗೆ "ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ, ಯಮ್ ಪೃಥಿವಿ ನವೇದ......................" ಇತ್ಯಾದಿ ಸೂತ್ರಕ್ಕೆ ಆಚಾರ್ಯರು 21 ಉದಾಹರಣೆಗಳಿಂದ ಸಮರ್ಥಿಸಿದ್ದಾರೆ.

ಮಹಾಭಾರತದ ಶಾಂತಿಪರ್ವ ಮೋಕ್ಷಧರ್ಮ ಪರ್ವ 318ನೇ ಅಧ್ಯಾಯದ 80ನೇ ಶ್ಲೋಕದಲ್ಲಿ ಗಂಧರ್ವ ರಾಜನಾದ ವಿಶ್ವಾವಸುವಿನ ಪ್ರಶ್ನೆಗೆ ಜೀವೇಶ್ವರ ಭೇದದ ವಿವರವನ್ನು ಯಾಜ್ಞವಲ್ಕ್ಯರು ಕೊಟ್ಟಿದ್ದಾರೆ.

ಹರಿಸರ್ವೋತ್ತಮದ ಬಗ್ಗೆ ಗರುಡ ಪುರಾಣದ 92ನೇ ಅಧ್ಯಾಯದ 17ನೇ ಶ್ಲೋಕದಲ್ಲಿ "ಧ್ಯಾಯನ್ ಏವಂಚ ಯೋಽ ವಿಷ್ಣುಂ.............................." ಹರಿಯು ಹರನೊಂದಿಗೆ ಸಂವಾದ ಮಾಡುವಾಗ ಯಾಜ್ಞವಲ್ಕ್ಯರು ಹರಿಸರ್ವೋತ್ತಮ ತತ್ವ ಪ್ರತಿಪಾದಿಸಿ ಪರಮ ಪದವನ್ನು ಸೇರಿದನೆಂದು ಹೇಳಿದ್ದಾರೆ. ಇದೇ ಉಪನಿಷತ್ತಿನ 3ನೇ ಅಧ್ಯಾಯದಲ್ಲಿ ಗಾರ್ಗಿಯ ಬ್ರಾಹ್ಮಣದಲ್ಲಿ "ಕಸ್ಮಿನ್ ಖಲು ಪ್ರಜಾಪತಿ ಲೋಕ.................ಬ್ರಹ್ಮಲೋಕ ಗಾರ್ಗಿಯಿತಿ..............................." ಎಂಬ ಮಂತ್ರದಲ್ಲಿ ಹರಿಸರ್ವೋತ್ತಮನೆಂದು ಪ್ರತಿಪಾದಿಸಿದ್ದನ್ನು ಆಚಾರ್ಯರು ಇದರ ಭಾಷ್ಯದಲ್ಲಿ ವಿವರಿಸಿದ್ದಾರೆ.

ಯಾಜ್ಞವಲ್ಕ್ಯರು ತಮ್ಮ ಸ್ಮೃತಿ, ಶತಪಥ ಬ್ರಾಹ್ಮಣ, ಯೋಗಯಾಜ್ಞವಲ್ಕ್ಯ ಇತ್ಯಾದಿ ಕೃತಿಗಳಲ್ಲಿ ಹರಿಸರ್ವೋತ್ತಮ ತತ್ವವನ್ನು ಪ್ರತಿಪಾದಿಸಿದ್ದನ್ನು ಕಾಣಬಹುದು.

ಪು.ತಿ.ನೋ..

**ವಾಯುಜೀವೋತ್ತಮ ತತ್ವ :**

ಇದೇ ಉಪನಿಷತ್ತಿನ ಅ. 1 ರಲ್ಲಿ ಅವ್ಯಾಕೃತ ಬ್ರಾಹ್ಮಣದಲ್ಲಿ ಒಂದು ಸಲ ದೇವತೆಗಳು ದೈತ್ಯರಿಂದ ಸೋತಾಗ ಸಾಮಗಾನ ಮಾಡಿ ಹರಿಯನ್ನು ಒಲಿಸಿಕೊಳ್ಳಬೇಕೆಂದರು. ಇತರ ದೇವತೆಗಳು ಅಸುರಾವೇಶಕ್ಕೆ ಒಳಗಾದರೇ, ವಾಯುದೇವರು ಮಾತ್ರ ಒಳಗಾಗಲೇ ಇಲ್ಲ. ಆದ್ದರಿಂದ ಜೀವೋತ್ತಮರು ಮಾತ್ರವಲ್ಲದೇ ದೇವತೆಗಳಲ್ಲಿ ಕೂಡಾ ಶ್ರೇಷ್ಠರೆಂದು ಯಾಜ್ಞವಲ್ಕ್ಯರು ಘೋಷಿಸಿದ್ದಾರೆ.

ಮತ್ತೊಂದು ಕಡೆ ಅ. 6 ರ ಪ್ರಥಮ ಬ್ರಾಹ್ಮಣದಲ್ಲಿ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ವಾಯುದೇವರೇ ಜೀವೋತ್ತಮರೆಂದು ಪ್ರತಿಪಾದಿಸಿದ್ದಾರೆ. ಯಾಜ್ಞವಲ್ಕ್ಯರ ಕೃತಿಗಳು ಸುಮಾರು 6–7 ಸಾವಿರ ವರ್ಷಗಳ ಹಿಂದಿನವು ಆಚಾರ್ಯರ ಕಾಲ 800 ವರ್ಷಗಳ ಹಿಂದಿನದು.

**ಯಾಜ್ಞವಲ್ಕ್ಯರು ಸನ್ಯಾಸಿಗಳು ಎಂಬುವ ಬಗ್ಗೆ :**

1) ಇದೇ ಉಪನಿಷತ್ತಿನ 4ನೇ ಅಧ್ಯಾಯದ ಮೈತ್ರೇಯಿ ಬ್ರಾಹ್ಮಣ ನೋಡಿ ಮತ್ತು 2) ಗೌತಮ ಋಷಿಗಳು ಮುನಿ ವೃಂದಕ್ಕೆ ಯಾಜ್ಞವಲ್ಕ್ಯ ಅಷ್ಟೋತ್ತರ ಶತನಾಮ ಸ್ತೋತ್ರ 12ನೇ ಶ್ಲೋಕದಲ್ಲಿ "ಸನ್ಯಾಸಿನಾಮ ಆದಿಮಶ್ಚ..................." ಸನ್ಯಾಸಿಗಳಲ್ಲಿ ಮೊದಲನೆಯವರು ಎಂದು ಬಣ್ಣಿಸಿದ್ದನ್ನು ವೇದವ್ಯಾಸ ರಚಿತ ಉತ್ತರ ಕಾಂಡ ಸನತ್ಕುಮಾರ ಸಂಹಿತೆ ಆದಿತ್ಯ ಪುರಾಣದಲ್ಲಿ ಕಾಣಬಹುದು. ಇದರ ಉಲ್ಲೇಖ ಅನೇಕ ಕಡೆ ಲಭ್ಯವಿದೆ. ಇನ್ನೊಂದು ಅರ್ಥಯ ಉಕ್ತಿ ತುರಿಯಾಶ್ರಮ ಸಂಸ್ಥಸ್ಯ ಯಜುರ್ವೇದಿ ಭವೇತ ಧ್ರುವಂ!. ತದಾಶ್ರಮಸ್ಯ ಆದಿಗುರುಃ ಯಾಜ್ಞವಲ್ಕ್ಯೋ ಯಜುರ್ಮುನಿಃ ಅಂದರೆ ಸನ್ಯಾಸಾಶ್ರಮದ ಮೊದಲ ಗುರುಗಳು ಯಜುರ್ವೇದಿಗಳಾದ ಯಾಜ್ಞವಲ್ಕ್ಯರು ಎಂದು ಅರ್ಥ.

**ಯಾಜ್ಞವಲ್ಕ್ಯರ ಶ್ರೇಣಿಯ ಬಗ್ಗೆ :**

ಇವರು ಋಷಿಗಳು ಆದ್ದರಿಂದ 19ನೇಕಕ್ಷದವರೆಂದು ಸಾಮಾನ್ಯರ ಭಾವನೆ ಈ ಲೆಖ್ಖದಿಂದ ಮಧ್ವಾಚಾರ್ಯರು ರಾಘವೇಂದ್ರಸ್ವಾಮಿಗಳಿಗಿಂತ ಕನಿಷ್ಠ ಶ್ರೇಣಿಯಲ್ಲಿ ಬರುತ್ತಾರೆ ಎಂಬ ಭಾವನೆ. ಆದರೆ ಇವರುಗಳು ಅವರಿಗೆ ಅತಿಗೌರವ ಕೊಟ್ಟು ಅವರ ಕೃತಿಗಳಿಗೆ ಭಾಷ್ಯ, ಪಿಂಡಾರ್ಥ ಬರೆದಿದ್ದಾರೆ. ಈ ಗೊಂದಲದ ಪರಿಹಾರಕ್ಕೆ ಆಚಾರ್ಯರ ಭಾಷ್ಯವೇ ಸಾಕು. ವಿಷ್ಣು, ಚತುರ್ಮುಖ ಮತ್ತು ವಾಯು ಇವರನ್ನು ಬಿಟ್ಟು ಇತರ ದೇವತೆಗಳು ಋಷಿಗಳು ಸಾಮಾನ್ಯವಾಗಿ ಸರ್ವ ಶುಭ ಲಕ್ಷಣ ಸಂಪನ್ನರಲ್ಲ. ಯಾಜ್ಞವಲ್ಕ್ಯರು ಮಾತ್ರ ಸರ್ವಲಕ್ಷಣಗಳಿಂದ ಕೂಡಿದವರು. ಅವರ ವಾಕ್ಯವು ಪ್ರಮಾಣವೆಂದು ಹೇಳಬೇಕೇನು? (ಬೃಹ ॥ ಅ।3 ಶಾಕಲ್ಯ ಬ್ರಾಹ್ಮಣ) ಜನಕರಾಜನ ಜ್ಞಾನ ಸತ್ರದ.

ಇದೇ ಸಂದರ್ಭದಲ್ಲಿ ಸಭಿಕರಿಗೆ ಯಾಜ್ಞವಲ್ಕ್ಯರು ಮಾಡಿದ ಪ್ರಶ್ನೆಗೆ ಎದೆಗುಂದಿ ಯಾರು ಉತ್ತರಿಸಲಿಲ್ಲ. ತಮ್ಮ ಪ್ರಶ್ನೆಗೆ ತಾವೇ ಉತ್ತರಿಸಿದ ಮಹಾಮುನಿಗಳು ಎಂದು ಬಣ್ಣಿಸಿದ್ದಾರೆ. ಇವರ ಶ್ರೇಣಿಯ ನಿರ್ಣಯ ಕೈಗೊಳ್ಳುವಾಗ ಇನ್ನೊಂದು ಎರಡು ಸಂದರ್ಭಗಳನ್ನು ಗಮನಿಸುವುದು ಸೂಕ್ತವಾಗುತ್ತದೆ. ಶ್ರೀ ಕೃಷ್ಣ ಬಲರಾಮರು ವಿಶ್ವವಂದಿತರಾದ ಯೋಗೀಶ್ವರರಿಗೆ ನಮನಮಾಡಿ ಪಾದ ಪೂಜೆಮಾಡಿ ಶ್ರೀ ಕೃಷ್ಣನು ಅಂದದ್ದು, ನಾವು ಜನ್ಮ ತಾಳಿದ್ದಕ್ಕೆ ಪೂರ್ಣ ಫಲ ದೊರಕಿತು. ಏಕೆಂದರೇ ಇವರ ದರ್ಶನ ದೇವತೆಗಳಿಗೂ ಅತ್ಯಂತ ದುರ್ಲಭ...........( ಶ್ರೀಮದ್ ಭಾಗ್ವತಂ॥ 10– ಅ॥ 84, ಶ್ಲೋ॥ 6 ರಿಂದ 12)

ಇನ್ನೊಂದು ಸನ್ನಿವೇಶ: 'ಸಾಂಬ, ದೂರ್ವಾಸರ ಶಾಪದಿಂದ ವ್ಯಾದಿಗ್ರಸ್ತನಾಗಿ ನಿವಾರಣೋಪಾಯ ಕಾಣದೇ ಆತ್ಮಹತ್ಯೆಗೆ ಅಪ್ಪಣೆ ಕೋರಲು ತಂದೆಯಾದ ಶ್ರೀ ಕೃಷ್ಣನನ್ನು ಬೇಡಿಕೊಂಡನು. ಆಗ ಸ್ವಾಮಿಯು ಭಯ ಪಡಬೇಡ. ಋಷಿಯಾದ ಯೋಗೀಶ್ವರನಾದ ಮಹಾತ್ಮನಾದ ಯಾಜ್ಞವಲ್ಕ್ಯನ ಸಂವಾದ ಬ್ರಹ್ಮದೇವರೊಂದಿಗೆ ಆದ ಬೆಳಕಿನಲ್ಲಿ ದೇವತಾರಾಧನೆ ಮಾಡು."

ಈ ಮೇಲಿನ ಎಲ್ಲಾ ವಿಷಯಗಳನ್ನು ಪರಾಮರ್ಶಿಸಿ ಸಾಧಕರು ಯಾಜ್ಞವಲ್ಕ್ಯರ ಶ್ರೇಣಿಯ ಬಗ್ಗೆ ನಿರ್ಣಯಕ್ಕೆ ಬರುವಾಗ ಯಾಜ್ಞವಲ್ಕ್ಯರ ಮತ್ತು ಮಧ್ವಾಚಾರ್ಯರ ಆಯಾ ಅವತಾರಗಳಲ್ಲಿಯ ಪವಾಡಗಳನ್ನು ಅನುಲಕ್ಷಿಸಿ ನಿರ್ಣಯ ಕೈಕೊಳ್ಳಬೇಕು. ಇನ್ನೊಂದು ಮಾತು ಮಧ್ವಾಚಾರ್ಯರ ಮೂಲ ಅವತಾರವಾದ ವಾಯುದೇವರು, ಯಾಜ್ಞವಲ್ಕ್ಯರ ಮೂಲ ಅವತಾರವಾದ (ಸ್ಕಂದ 129 ಅ॥) ಬ್ರಹ್ಮದೇವರ ಸ್ಥಾನಕ್ಕೆ ಮುಂದೆ ಬರತಕ್ಕವರು ಇದು ಸರ್ವ ವಿಧಿತ. ಇದರ ಬಗ್ಗೆ ನಮ್ಮಲ್ಲಿ ಅನೇಕ ಪುರಾವೆಗಳು ಇವೆ. ಯಾರಿಗಾದರೂ ಸಂಶಯ ಇದ್ದಲ್ಲಿ ತಮ್ಮ ನಿಲುವಿನ ಆಧಾರಗಳನ್ನು ತೆಗೆದುಕೊಂಡು ಚರ್ಚೆಗೆ ಬರಲು ಸಾದರ ಸ್ವಾಗತವಿದೆ.

ಇಂತಿ **ನಾರಾಯಣಸ್ಮರಣಂ**

**ಶ್ರೀಮದ್ ವಿದ್ಯಾಭಾಸ್ಕರ ತೀರ್ಥ ಶ್ರೀ ಪಾದಂಗಳವರು**

**ಕಣ್ವಮಠ, ಹುಣಸಿಹೊಳೆ**